**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.137/2020**

**(ಚಾ.ಸಾ.1/ಪ್ರಾ.ಸಾ.4)**

ತಾಃ 12.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ರಾಜೇಶ್ |
| ತಂದೆಯ ಹೆಸರು | ಸಿದ್ದಾಚಾರ್ |
| ವಯಸ್ಸು | 41 ವರ್ಷ |
| ಉದ್ಯೋಗ | ಟೈಲರ್ |
| ವಾಸ ಸ್ಥಳ | ಮದ್ದೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರ ಪರಿಚಯ ನನಗೆ ಇಲ್ಲ. ಮೃತ ಪ್ರಸನ್ನ ಕುಮಾರ್ ನನ್ನ ಮಾವನಾಗಬೇಕು. 5 ವರ್ಷದ ಹಿಂದೆ ಸದರಿ ಪ್ರಸನ್ನ ಕುಮಾರ್ ರವರ ಕೊಲೆ ಆಗಿರುತ್ತದೆ. ಸದರಿ ಪ್ರಸನ್ನ ಕುಮಾರ್ ರವರ ಕೊಲೆಯನ್ನು ಯಾರು, ಎಲ್ಲಿ ಮತ್ತು ಹೇಗೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಈಗ ಆ ದೂರನ್ನು ನೋಡುತ್ತಿದ್ದು ಅದನ್ನು ನಿ.ಪಿ.3 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ನಿ.ಪಿ.3 ರಲ್ಲಿ ಏನು ಬರೆಯಲಾಗಿದೆ ಮತ್ತು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಯಾವುದೇ

ಗಾಯಗಳು ಆಗಿರುವುದಿಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿರುವುದಿಲ್ಲ. ಹಾಗೆಯೇ ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಈಗ ಆ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿ.ಪಿ.4 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಛಾಯಾಚಿತ್ರಗಳನ್ನು ತೆಗೆದಿರುವುದಿಲ್ಲ. ಈಗ ನಿ.ಪಿ.1 ಅನ್ನು ನೋಡುತ್ತಿದ್ದು ಅದನ್ನು ನನ್ನ ಸಮಕ್ಷಮ ತೆಗೆದಿರುವುದಿಲ್ಲ. ಆದರೆ ನಿ.ಪಿ.1 ರಲ್ಲಿ ಮೃತ ಪ್ರಸನ್ನ ಕುಮಾರ್ ರವರ ದೇಹ ಕಾಣಿಸುತ್ತದೆ. ಈ ಕುರಿತು ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿಲ್ಲ. ಆರೋಪಿತರನ್ನು ದಸ್ತಗಿರಿ ಮಾಡಿಕೊಂಡು ಬಂದು ನನ್ನ ಸಮಕ್ಷಮ ಹಾಜರುಪಡಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

2. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ನಿ.ಪಿ.3 ಕ್ಕೆ ಸಹಿ ಮಾಡುವಾಗ ಅದರಲ್ಲಿ ಬರವಣಿಗೆ ಆಗಿತ್ತು. ನಾನು ನಿ.ಪಿ.3 ಕ್ಕೆ ಸಹಿ ಮಾಡುವ ಮುನ್ನ ಅದನ್ನು ಓದಿರುವುದಿಲ್ಲ. ಸಾಮಾನ್ಯವಾಗಿ ನಾನು ಯಾವುದೇ ಪತ್ರಗಳಿಗೆ ಸಹಿ ಮಾಡುವ ಮುನ್ನ ಅದನ್ನು ಓದುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಯಾವುದಕ್ಕೂ ಸಹಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನಿ.ಪಿ.4 ಕ್ಕೆ ಸಹಿ ಮಾಡುವ ಮುನ್ನ ಅದರಲ್ಲಿ ಬರವಣಿಗೆ ಆಗಿತ್ತು. ನಿ.ಪಿ.4 ಕ್ಕೆ ಸಹಿ ಮಾಡುವ ಮುನ್ನ ಅದನ್ನು ಓದಿರುವುದಿಲ್ಲ.

3. ದಿ:15.02.2020 ರಂದು ಸಂಜೆ 6.00 ಗಂಟೆಗೆ ಗಣೇಶ ಎನ್ನುವವರು ಕರೆ ಮಾಡಿ ತನ್ನ ಸ್ನೇಹಿತನಾದ ಅವಿನಾಶ್ ಮತ್ತು ನವೀನ್ ಎಂಬುವವರು ಬಂದಿದ್ದು ಅವರು ಮನೆಯಲ್ಲಿ ಉಳಿದುಕೊಂಡಿರುವುದಾಗಿ ಹೇಳಿದ್ದ ಎಂದರೆ ಸರಿಯಲ್ಲ. ಆ ನಂತರ ಮೃತ, ಚಂದು, ಗಣೇಶ, ನವೀನ್ ಮತ್ತು ಅವಿನಾಶ್ ರವರು ಸಹ ನಮ್ಮ ಸೋದರ ಅತ್ತೆ ಮನೆಯಲ್ಲಿ ಉಳಿದಿದ್ದರು ಎಂದರೆ ಸರಿಯಲ್ಲ. ದಿ:16.02.2020 ರಂದು ಬೆಳಿಗ್ಗೆ ಪ್ರಸನ್ನ ಕುಮಾರ್ ರವರು ಮೊಬೈಲ್ ಬಿಟ್ಟಿರುವ ಸಂಬಂಧ ಗಲಾಟೆ ಮಾಡಿ ಆರೋಪಿತರು ಹೊರಟು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ವಾಯು ನಂದನ ಬಾರ್ ನಲ್ಲಿ ಇದ್ದಾಗ 1 ಮತ್ತು 2ನೇ ಆರೋಪಿತರು ದ್ವಿಚಕ್ರ ವಾಹನದಲ್ಲಿ ಮೃತನನ್ನು ಕರೆದುಕೊಂಡು ಬಂದು ಬಯಲು ಪ್ರದೇಶಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಆ ದಿನ ಮೃತನಿಗೆ ಆರೋಪಿತರೆಲ್ಲರೂ ಮೊಬೈಲ್ ಕೊಡು ಎಂದು ಹೊಡೆದಿದ್ದರು ಎಂದರೆ ಸರಿಯಲ್ಲ.

4. ಮಾರನೇ ದಿನ ದಿ:17.02.2020 ರಂದು ಬೆಳಿಗ್ಗೆ ಮೊಬೈಲ್ ಕೊಡು ಇಲ್ಲದಿದ್ದರೆ 15 ಸಾವಿರ ಹಣ ತರಿಸಿಕೊಡು ಎಂದು ಮೃತನನ್ನು ಕೇಳಿದ್ದು ಮೃತನು ತನ್ನ ಬಾಮೈದುನನಿಗೆ ಕರೆ ಮಾಡಿ 5 ಸಾವಿರ ತರಿಸಿಕೊಂಡು ಮೃತನಿಗೆ ಹೊಡೆಯಬೇಡಿ ಎಂದು ಹೇಳಿ ಪುನಃ ಹಣ ತರಲು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆಗ 1 ಮತ್ತು 2ನೇ ಆರೋಪಿತರು ನನ್ನನ್ನು ಮೋಟಾರ್ ಸೈಕಲ್ ನಲ್ಲಿ ಕೂರಿಸಿಕೊಂಡು ಓನರ್ ಬಳಿ ಬಂದಿದ್ದು 5 ಸಾವಿರ ತೆಗೆದುಕೊಂಡು ಅದನ್ನು ಆರೋಪಿತರು ಪಡೆದುಕೊಂಡಿದ್ದು ನನಗೆ ರೂ.100/- ಬಸ್ಸಿಗೆ ನೀಡಿದ್ದು ನಾನು ವಾಪಸ್ ಊರಿಗೆ ಹೋಗಿರುತ್ತೇನೆ ಎಂದರೆ

ಸರಿಯಲ್ಲ.

5. ದಿಃ18.02.2020 ರಂದು ಬೆಳಿಗ್ಗೆ 11.00 ಗಂಟೆಗೆ ಮೃತನ ಹೆಂಡತಿ ಪುಷ್ಪಾಳ ಅಕ್ಕ ವಿಜಯಲಕ್ಷ್ಮೀ ರವರಿಗೆ ಕರೆ ಮಾಡಿ ಅಂಜನಾನಗರದ ಬಳಿ ಯಾರೋ ಪ್ರಸನ್ನ ಕುಮಾರ್ ರವರನ್ನು ಹೊಡೆದು ಸಾಯಿಸಿರುವುದು ತಿಳಿಸಿ ನನ್ನನ್ನು ಕಳುಹಿಸಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಾದ ನಂತರ ನಾನು ಅಂಜನಾನಗರದ ಬಳಿ ಹೋಗಿ ನೋಡಲಾಗಿ ಅಲ್ಲಿ ಪ್ರಸನ್ನ ಕುಮಾರ್ ರವರ ಶವ ಇದ್ದು ಆತನಿಗೆ ಆರೋಪಿತರೆಲ್ಲರೂ ಸೇರಿ ಹಳೆಯ ದ್ವೇಷದಿಂದ ದೊಣ್ಣೆಗಳಿಂದ ಹೊಡೆದು ಕೊಲೆ ಮಾಡಿರುವುದಾಗಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ಈಗ ಓದಿ ಹೇಳಿದಂತೆ ನಿ.ಪಿ.3 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

6. ದಿಃ18.02.2020 ರಂದು ಶವ ಇದ್ದ ಸ್ಥಳದಲ್ಲಿ ಮಧ್ಯಾಹ್ನ 2.30 ರಿಂದ 3.30 ರವರೆಗೆ ನನ್ನ ಹಾಗೂ ಪಂಚರ ಸಮಕ್ಷಮ ನಿ.ಪಿ.4 ರಂತ ಪಂಚನಾಮೆ ಮಾಡಿ ನಿ.ಪಿ.1 ರಂತೆ ಛಾಯಾಚಿತ್ರ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ಆರೋಪಿತರು ಉಪಯೋಗಿಸಿದ ದೊಣ್ಣೆ ಇದ್ದು ಅದನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ನಂತರ ದಿಃ29.02.2020 ರಂದು ನ್ಯಾಯಾಲಯದಲ್ಲಿ ಇರುವ 1 ರಿಂದ 5ನೇ ಆರೋಪಿತರನ್ನು ದಸ್ತಗಿರಿ ಮಾಡಿಕೊಂಡು ಬಂದಿದ್ದು ಅವರನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಕುರಿತು ನಿ.ಪಿ.5 ಮತ್ತು 6 ರಂತೆ ಆರೋಪಿತರನ್ನು ಗುರುತಿಸಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.3 ರಂತೆ ದೂರನ್ನು ನೀಡಿದ್ದರೂ, ನನ್ನ ಸಮಕ್ಷಮ ನಿ.ಪಿ.4 ರಂತೆ ಪಂಚನಾಮೆ ಮಾಡಿದ್ದರೂ ಹಾಗೂ

ನಿ.ಪಿ.5 ಮತ್ತು 6 ರಂತೆ ಹೇಳಿಕೆಯನ್ನು ನೀಡಿದ್ದರೂ ಈಗ ಆರೋಪಿತರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಹೆಚ್ ಕೆ ವಕೀಲರಿಂದಃ**

7. ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಶಿಲ್ಪಾ ಕೆ.ಎಸ್.)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.